194 ಪಶುವೈದ್ಯಾಧಿಕಾರಿಗಳ ನೇಮಕಾತಿ ಮಾಡಲು ಪ್ರಸ್ತಾವನೆ ಸಹ ಪರಿಶೀಲನೆಯಲ್ಲಿದೆ ಪಶುವೈದ್ಯಕೀಯ ಮೇಲ್ವಿಚಾರಕರು ಮತ್ತು ಹಿರಿಯ ಪಶುವೈದ್ಯಕೀಯ ಪರೀಕ್ಷಕರು ಹುದ್ದೆಯನ್ನು ಮುಂಬಡ್ತಿ ಮುಖೇನ ಭರ್ತಿ ಮಾಡಲಾಗುತ್ತದೆ 300 ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ಪಶುವೈದ್ಯಕೀಯ ಸಹಾಯಕರ ಹುದ್ದೆಗಳನ್ನು ಇಲಾಖೆಯಲ್ಲಿನ ಎಸ್ ಎಸ್ ಎಲ್ ಸಿ ಪಾಸಾದ ಡಿ ದರ್ಜೆ ನೌಕರರಿಗೆ ತರಬೇತಿ ನೀಡಿ ಬಡ್ತಿ ಮುಖೇನ ತುಂಬಲು ಕ್ರಮವಹಿಸಿದ್ದು ಈಗಾಗಲೇ 244 ಡಿ ದರ್ಜೆ ನೌಕರರಿಗೆ ತರಬೇತಿ ನೀಡಲಾಗಿದೆ ಎಸ್ ಎಸ್ ಎಲ್ ಸಿ ಅಂಕಪಟ್ಟಿ ಪರೀಕ್ಷೆ ಮಂಡಳಿಯ ಪರಿಶೀಲನೆಗೆ ಕಳುಹಿಸಿದ್ದು ವರದಿ ಬಂದ ಕೂಡಲೇ ಭರ್ತಿ ಮಾಡಲು ಕ್ರಮ ಜರುಗಿಸಲಾಗುವುದು 300 ಡಿ ದರ್ಜೆ ನೌಕರರ ಹುದ್ದೆಗಳನ್ನು ಔಟ್ ಸೋರ್ಸ್ ಮುಖೇನ ಭರ್ತಿ ಮಾಡಲು ಕ್ರಮ ಜರುಗಿಸಲಾಗುತ್ತಿದೆ

616 (880) ಶ್ರೀ ಪದ್ಮನಾಭ ಕೊಟ್ಟಾರಿ ಕೆ (ವಿಟ್ಲ) ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾಂತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಟ್ಲದಲ್ಲಿರುವ ಐ ಟಿ ಐ ತರಬೇತಿ ಕೇಂದ್ರಕ್ಕೆ ಮಂಜೂರಾಗಿರುವ ವಿವಿಧ ದರ್ಜೆಗಳ ಹುದ್ದೆಗಳ ಸಂಖ್ಯೆ ಎಷ್ಟು? ಅವುಗಳಲ್ಲಿ ಖಾಲಿ ಇರುವ ಹುದ್ದೆಗಳು ಎಷ್ಟು?

ಆ) ಗ್ರಾಮಾಂತರ ಪ್ರದೇಶದಲ್ಲಿರುವ ಈ ಕೈಗಾರಿಕಾ ತರಬೇತಿ ಕೇಂದ್ರಕ್ಕೆ ಕೊರತೆ ಇರುವ ಸಿಬ್ಬಂದಿ ವರ್ಗದವರನ್ನು ತುಂಬಲು ದೀರ್ಘಕಾಲದಿಂದಲೂ ಸರ್ಕಾರ ಕ್ರಮ ಜರುಗಿಸದೇ ಇರಲು ಕಾರಣಗಳೇನು?

ಇ) ಸಿಬ್ಬಂದಿ ಮತ್ತಿತರ ಮೂಲಭೂತ ಸೌಲಭ್ಯಗಳಿಲ್ಲದೆ ಇಂಥ ಶಿಕ್ಷಣ ಕೇಂದ್ರಗಳನ್ನು ನಡೆಸುವುದರಿಂದ ಗ್ರಾಮೀಣ ಜನರಿಗೆ ಯಾವ ಶೈಕ್ಷಣಿಕ ಉಪಯುಕ್ತತೆಗಳು ಲಭ್ಯವಾಗುವುದಿಲ್ಲವೆಂಬುದನ್ನು ಸರ್ಕಾರ ಮನಗಂಡಿದೆಯೇ? ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

ಅ) ಯಾವ ಹುದ್ದೆಗಳು ಮಂಜೂರಾತಿ ಆಗಿರುವುದಿಲ್ಲ ತಾತ್ಕಾಲಿಕ ಹುದ್ದೆಗಳನ್ನು ಬೇರೆ ಕೈಗಾರಿಕಾ ತರಬೇತಿ ಸಂಸ್ಥೆಗಳಿಂದ, ಪ್ರಾಚಾರ್ಯರು–01, ಕಿರಿಯ ತರಬೇತಿ ಅಧಿಕಾರಿ–4, ಪ್ರಥಮ ದರ್ಜೆ ಸಹಾಯಕರು–1, ಒಟ್ಟು ಆರು ಹುದ್ದೆಗಳನ್ನು ಸ್ಥಳಾಂತರಿಸಲಾಗಿದೆ

ಆ) ಆರ್ಥಿಕ ಮಿತವ್ಯಯ ಸಡಿಲಿಕೆಯು ಪರಿಶೀಲನೆಯಲ್ಲಿದೆ

ಇ) ಅತಿಥಿ ಬೋಧಕರ ಸೇವೆಯನ್ನು ಉಪಯೋಗಿಸಿಕೊಂಡು ಪ್ರಸ್ತುತ ಸಂಸ್ಥೆಯಲ್ಲಿ ಅನುಷ್ಠಾನಗೊಳಿಸಲಾಗಿರುವ ವೃತ್ತಿಗಳಲ್ಲಿ ವ್ಯವಸ್ಥಿತವಾಗಿ ತರಬೇತಿ ನೀಡಲಾಗುತ್ತಿದೆ 1 25 ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ ಪಠ್ಯಕ್ರಮ ಪ್ರಕಾರ ಯಂತ್ರೋಪಕರಣಗಳನ್ನು ಒದಗಿಸಲಾಗಿದೆ

617 (1073) ಶ್ರೀ ಪಾಟೀಲ್ ಡಿ ಆರ್ (ಗದಗ) ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವೈದ್ಯಕೀಯ ಶಿಕ್ಷಣದಲ್ಲಿ ಪಿ ಜಿ ಪರೀಕ್ಷೆಯ ಫಲಿತಾಂಶದೊಂದಿಗೆ ರ್ಯಾಂಕ್ ಪಡೆದವರ ಪಟ್ಟಿಯನ್ನು ಪ್ರಕಟಿಸದಿರಲು ಕಾರಣವೇನು?

ಆ) ಪರೀಕ್ಷೆಯು ಫಲಿತಾಂಶ ಬಂದಾಗ ಉಳಿದೆಲ್ಲ ಸಂಬಂಧಿಸಿದ ವಿಶ್ವವಿದ್ಯಾಲಯಗಳ ರ್ಯಾಂಕ್ ಪಡೆದ ವಿದ್ಯಾರ್ಥಿಗಳ ಹೆಸರು ಮತ್ತು ಅಂಕಗಳನ್ನು ಪ್ರಕಟಿಸುವಾಗ ಇಲ್ಲಿಯೂ ಪ್ರಕಟಿಸಲು ಕ್ರಮ ಕೈಗೊಳ್ಳಲಾಗುವುದೇ?

ಡಾ ಎ ಎಸ್ ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು)

ಅ) ಅಭ್ಯರ್ಥಿಗಳು ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ಪಾಸಾಗಲು ಕನಿಷ್ಠ 50 ಪ್ರತಿಶತ ಅಂಕಗಳನ್ನು ಪಡೆದಿರಬೇಕು, ಮೊದಲು ಶ್ರೇಣಿ ಗಳಿಸಲು ಕನಿಷ್ಠ 65 ಪ್ರತಿಶತ ಹಾಗೂ ಡಿಸ್ಟಿಂಕ್ಷನ್ ಗಳಿಸಲು ಕನಿಷ್ಠ 75 ಪ್ರತಿಶತ ಅಂಕಗಳನ್ನು ಪಡೆದಿರಬೇಕು

ವೈದ್ಯಕೀಯ ಶಿಕ್ಷಣದ ಸ್ನಾತಕೋತ್ತರ ಪದವಿಗಾಗಿ ಪ್ರತಿಯೊಂದು ವಿಷಯಗಳಲ್ಲಿ ವಿಶ್ವವಿದ್ಯಾಲಯದಡಿಯಲ್ಲಿ ಹತ್ತಕ್ಕಿಂತಲೂ ಕಡಿಮೆ ಸಂಖ್ಯೆಯ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿರುತ್ತಾರೆ ಇಂಥ ಸಂದರ್ಭಗಳಲ್ಲಿ 50 ರಿಂದ 55 ಪ್ರತಿಶತ ಅಂಕಗಳನ್ನು ಗಳಿಸಿ ಪಾಸಾದ ಅಭ್ಯರ್ಥಿಗಳಿಗೂ ರ್ಯಾಂಕ್ ಕೊಡಬೇಕಾದ ಅನಿವಾರ್ಯತೆ ಬರುವುದರಿಂದ ವೈದ್ಯಕೀಯ ಶಿಕ್ಷಣದಲ್ಲಿ ಸ್ನಾತಕೋತ್ತರ ಪರೀಕ್ಷೆಯ ಫಲಿತಾಂಶದೊಂದಿಗೆ ರ್ಯಾಂಕ್ ಪಡೆದವರ ಪಟ್ಟಿಯನ್ನು ಪ್ರಕಟಿಸಲಾಗುತ್ತಿಲ್ಲ

ಆ) ಮತ್ತು ಇ) ಉಳಿದ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಪದವಿ ವಿಷಯಗಳು ಕಡಿಮೆ ಇದ್ದು, ಪ್ರತಿಯೊಂದು ವಿಷಯದಲ್ಲಿಯೂ ವಿದ್ಯಾರ್ಥಿಗಳ ಸಂಖ್ಯೆ ಅಧಿಕವಾಗಿರುತ್ತದೆ

ಸದರಿ ವಿಷಯವನ್ನು ಎಲ್ಲಾ ಅಧ್ಯಯನ ಮಂಡಳಿ, ಅಕಾಡೆಮಿಕ್ ಕೌನ್ಸಿಲ್, ನಿಕಾಯ ಮುಖ್ಯಸ್ಥರು, ಸೆನೆಟ್ ಹಾಗೂ ಸಿಂಡಿಕೇಟ್ ಸಭೆಗಳಲ್ಲಿ ಮಂಡಿಸಿ ಈ ಸಭೆಗಳ ನಿರ್ದಾರದಂತೆ ಕ್ರಮ ಕೈಗೊಳ್ಳಲಾಗುವುದು